(ಗೊಂದಲ)

ಅಧ್ಯಕ್ಷರು : – ನೀವು walk out ಮಾಡುತ್ತೀರಾ?

ಶ್ರೀ ಹೆಚ್.ಡಿ. ರೇವಣ್ಣ : – ಇದು ದಿವಾಳಿಯಾಗಿರುವ ಸರ್ಕಾರ. ಆದ್ದರಿಂದ ನಾವು ಇದನ್ನು ವಿರೋಧಿಸಿ walk out ಮಾಡುತ್ತೇವೆ.

(ಈ ಹಂತದಲ್ಲಿ ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : – ಮಾನ್ಯ ಸಭಾಧ್ಯಕ್ಷರೆ, ದಿನಾಂಕ 31.03.2013 ರಂದು, ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು ಲೇಖಾನುದಾನವಾಗಿ ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : – ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು ಮಂಡಿಸಿರುವ ಅನುದಾನ ಬೇಡಿಕೆಗಳ (ಲೇಖಾನುದಾನ) ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವು ಹೀಗಿದೆ.

ದಿನಾಂಕ 31.03.2013 ರಂದು, ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು ಈ ಸಭೆಯು ಲೇಖಾನುದಾನವಾಗಿ ಮಂಜೂರು ಮಾಡುತ್ತದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.